ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 56-2013

ಸಿ.ಡಬ್ಲ್ಯೂ-01
ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ನರಸಮ್ಮ

ಗಂಡನ ಹೆಸರು :- ಹೊನ್ನಪ್ಪ

ವಯಸ್ಸು :- 75 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ದೊಡ್ಡಕೊಪ್ಪಲು

**ಸಾಕ್ಷಿಗೆ ದಿಃ 08.05.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಕಲಂ 299 ಅಡಿಯಲ್ಲಿ  ಸಾಕ್ಷಿಯ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 30.06.2012 ರಂದು ನಾನು ನಮ್ಮ ಊರಿನಿಂದ ಅಟೋದಲ್ಲಿ ಹುಲಿಯೂರದುರ್ಗ ಟೌನಗೆ ಅಟೋದಲ್ಲಿ ನನ್ನ ತವರು ಮನೆ ಅರಕೆರೆ ಗ್ರಾಮಕ್ಕೆ ಹಬ್ಬಕ್ಕೆ ಹೋಗಲು ಬಂದಿರುತ್ತೇನೆ. ಬಸ್‌ನಿಲ್ದಾಣದ ಕಡೆ ನಡೆದುಕೊಂಡು ಹೋಗುತ್ತಿದ್ದಾಗ ಇಬ್ಬರು ಹೆಂಗಸರು ಬಂದು ನನಗೆ ಕಳ್ಳರು ಬರುತ್ತಾರೆ ಬಂಗಾರದ ಚೈನು, ಬಳೆ, ಓಲೆ ಹಾಕಿಕೊಂಡಿದ್ದೀಯಾ ಎಲ್ಲವನ್ನು ಕಿತ್ತುಕೊಂಡು ಹೋಗುತ್ತಾರೆ ಎಂದು ಹೇಳಿದ್ದು ನಾನು ಅದಕ್ಕೆ ನನ್ನ ವಡವೆಗಳನ್ನು ಬಿಚ್ಚಿಕೊಂಡು ಕೈಯಲ್ಲಿದ್ದ **ಕರವಸ್ತ್ರ**ಕ್ಕೆ ಹಾಕಿ ಸೊಂಟಕ್ಕೆ ಸಿಗಿಸಿಕೊಂಡಿದ್ದೆನು. ಅದೇ ರೀತಿ ಅಪರಿಚಿತ ಮಹಿಳೆ ಸಹ ತನ್ನ ಮೈ ಮೇಲಿದ್ದ ವಡವೆಗಳನ್ನು **ಕರವಸ್ತ್ರ** ದಲ್ಲಿ ಹಾಕಿ ಹಿಡಿದುಕೊಂಡಿದ್ದರು. ನಂತರ ನಾನು ಬಾಳೆಹಣ್ಣು ಮತ್ತು ಇತರೆ ಸಾಮಾನುಗಳನ್ನು ತರಲು ಅಂಗಡಿಗೆ ಹೋದಾಗ ಒಬ್ಬ ಅಪರಿಚಿತ ವ್ಯಕ್ತಿ ಅಲ್ಲಿಗೆ ಬಂದಿದ್ದು ದುಡ್ಡು ಕಳೆದು ಹೋಗಿದೆ ಸಿಕ್ಕಿದೆಯಾ ಎಂದು ಬಂದು ಆ ಮಹಿಳೆಯನ್ನು ಕೇಳಿರುತ್ತಾನೆ. ಆತ ಲುಂಗಿ ಮತ್ತು ಶರ್ಟನು ಧರಿಸಿದ್ದನು. ಅದಕ್ಕೆ ಅಪರಿಚಿತ ಮಹಿಳೆ ನನಗೆ ಯಾವುದೇ ಹಣ ಸಿಕ್ಕಿಲ್ಲ ಎಂದು ಹೇಳಿರುತ್ತಾಳೆ. ನಂತರ ಇಬ್ಬರು ಜಗಳ ಮಾಡಲು ಆರಂಭಿಸಿದರು. ನಂತರ

ನನಗೂ ಸಹ ನಿಮಗೇನಾದರೂ ಹಣ ಸಿಕ್ಕಿದೆಯಾ ಎಂದು ಕೇಳಿ ನೀವು ಪ್ರಮಾಣ ಮಾಡಿ ಎಂದು ಹೇಳಿರುತ್ತಾನೆ. ಜಗಳ ಆಡುವ ಕಡೆ ನನ್ನ ಗಮನ ಸೆಳೆದು ನನ್ನ ಬಳಿ **ಕರವಸ್ತ್ರ**ದಲ್ಲಿ ಇದ್ದ ಒಡವೆಗಳನ್ನು ತೆಗೆದುಕೊಂಡು ಹೋಗಿರುತ್ತಾನೆ. ನಂತರ ನಾನು ಪೊಲೀಸ್ ಠಾಣೆಗೆ ಅದೇ ದಿನ ಸಂಜೆ 7.00 ಗಂಟೆಗೆ ಹೋಗಿ ದೂರು ನೀಡಿರುತ್ತೇನೆ.

ನಂತರ ಮಾರನೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ-3 ಮತ್ತು 4 ರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 9.00 ರಿಂದ 10.00 ಗಂಟೆವರೆಗೆ ಮಾಡಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. **ಮೂಲ ದೂರು ಮತ್ತು ಪಂಚನಾಮೆ ಮೂಲ ಸಿಸಿ 43/2013 ಪ್ರಕರಣದಲ್ಲಿ ಇದ್ದು ಸದರಿ ಪ್ರಕರಣ ಈಗಾಗಲೇ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಕಳುಹಿಸಿರುವ ಕಾರಣ ದಾಖಲೆಗಳನ್ನು ಗುರುತಿಸಿರುವುದಿಲ್ಲ.**

ನಾನು ಪೊಲೀಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಸುಮಾರು 50 ವರ್ಷದ ಹೆಣ್ಣು ಮಗಳು ಹಸಿರು ಸೀರೆ ಮತ್ತು ಜಾಕೇಟನ್ನು ಧರಿಸಿದ್ದು, ಇನ್ನೊಬ್ಬಳು ಮಾಸಿದ ಬಣ್ಣದ ಸೀರೆ ಧರಿಸಿರುತ್ತಾಳೆ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಅವರ ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.